ಸಿ.ಸಿ .ನಂ. 109/2023                                ಪಿಡಬ್ಲೂಃ 1

ದಿನಾಂಕಃ 26-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀಮತಿ ಆರ್ ಜಿ ಎನ್ ವಕೀಲರಿಂದಃ**

7. ಈ ಪ್ರಕರಣಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಅಮಲ ಜಾರಿ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ . ಆ ಕೇಸಿನಲ್ಲಿ ಆರೋಪಿ ಹಣ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿ ಸಾಲಗಾರರಾಗಿರುತ್ತಾರೆ . ಆರೋಪಿ ನಮ್ಮ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾಲದ ಮರು ಪಾವತಿಗಾಗಿ ನಿಪಿ-2 ಚೆಕ್ ನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಂತಹ ಹಸ್ತಾಕ್ಷರ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಚೆಕ್ ನಲ್ಲಿರುವ ಬರವಣಿಗೆಯನ್ನು ನಮ್ಮ ಬ್ಯಾಂಕಿನವರೇ ಬರೆದಿರುತ್ತಾರೆ ಎಂದರೆ ಸರಿಯಲ್ಲ . ಆರೋಪಿಗೆ ನಾವು ವಕೀಲರ ಮೂಲಕ ಕಳಿಸಿದ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ . ನಿಪಿ-6 ಅಂಚೆ ಸ್ವೀಕೃತಿಯಲ್ಲಿರುವ ಸಹಿಗೂ ನಿಪಿ-2 ಚೆಕ್ ನಲ್ಲಿರುವ ಸಹಿಗೂ ಅಜಾಗಜಾಂತರ ವ್ಯತ್ಯಾಸ ಇದೆ ಎಂದರೆ ಸರಿ . ಆದರೆ ಅವರೇ ಹಾಕಿದ್ದು . ಅವರೇ ಸಹಿ ಹಾಕಿದ್ದು ಎಂದು ಹೇಳಲು ನಮ್ಮ ಬಳಿ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನೋಟಿಸು ತಲುಪಿದ್ದರೆ ಆರೋಪಿ ಬ್ಯಾಂಕಿಗೆ ಬಂದು ಉತ್ತರವನ್ನು ಕೊಡುತ್ತಿದ್ದರು ಎಂದರೆ ಸಾಕ್ಷಿ ಹಣ ತುಂಬುತ್ತೇನೆ ಎಂದು ಹೇಳಿ ಹೋಗಿದ್ದರು ಎಂದು ನುಡಿದಿರುತ್ತಾರೆ .ನಿಪಿ-3 ರಿಂದ ನಿಪಿ-10 ಎಲ್ಲಾ ದಾಖಲಾತಿಗಳು ನಮ್ಮ ಬ್ಯಾಂಕಿನ ದಾಖಲಾತಿಗಳು ಎಂದರೆ ಸರಿ . ಕರಾರು ಪತ್ರ , ಸಾಲದ ಅರ್ಜಿ , ಒಪ್ಪಂದ ಪತ್ರ ಎಲ್ಲಾ ದಾಖಲಾತಿಗಳು ನಮ್ಮ ಬ್ಯಾಂಕಿಗೆ ಬಂದ ವ್ಯಕ್ತಿಗಳಿಂದ ಸಹಿಗಳನ್ನು ಪಡೆಯುತ್ತೇವೆ ಎಂದರೆ ಸರಿ . ಮಾಹಿತಿ ಕೊಟ್ಟರೆ ಎಲ್ಲಾ ದಾಖಲಾತಿಗಳಲ್ಲಿ ಮಾಹಿತಿಯನ್ನು ನಾವೇ ಭರಣ ಮಾಡುತ್ತೇವೆ ಎಂದರೆ ಸರಿ . ದಾಖಲಾತಿಗಳಲ್ಲಿ ಸಾಲಗಾರ ಎಂದು ಇರುವ ಕಡೆ ಎಲ್ಲಾ ಆರೋಪಿಯ ಸಹಿಗಳನ್ನು ಪಡೆದಿದ್ದೇವೆ . ಆರೋಪಿ ಬೇರೆ ವ್ಯವಹಾರಕ್ಕೆ ಬಂದಾಗ ಆತನಿಂದ ಸಹಿಯನ್ನು ಪಡೆದು ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ಈ ಸಾಲಕ್ಕೂ ಆರೋಪಿಗೂ

ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ನಮೂದಿಸಿದ ಹಣ ನಿಪಿ-10 ರಲ್ಲಿ ನಮೂದಿಸಿದ ಹಣ ಒಂದಕ್ಕೊಂದು ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ . ನಿಪಿ-2 ಚೆಕ್ ನಲ್ಲಿ ರೂ. 1,37,900/- ಎಂದು ಬರೆದಿದೆ. ನಿಪಿ-10 ರಲ್ಲಿ ರೂ . 1,38,463/- ಬರೆದಿದೆ ಕಾರಣ ಒಂದಕ್ಕೊಂದು ತಾಳೆ ಆಗುತ್ತಿಲ್ಲ ಎಂದರೆ ಸಾಕ್ಷಿ ಚೆಕ್ ನಲ್ಲಿರುವ ಮೊತ್ತವನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ . ದಿಃ 16-10-2021 ರಂದು ಚೆಕ್ ನಲ್ಲಿ ನಮೂದಿಸಿದ ಹಣ ಬರಬೇಕಾಗಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನೋಟಿಸು ಮಾಡಿದ್ದೇವೆ ಎಂದು ನುಡಿದಿರುತ್ತಾರೆ . ನೋಟಿಸಿನಲ್ಲಿ ಇಂತಿಷ್ಟು ಹಣ ಬರಬೇಕು ಎಂದು ನಮೂದು ಮಾಡಿದ್ದೇವೆ . ಆ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಯಾವುದೋ ಹಳೇಯ ಸಾಲದ ಭದ್ರತೆಗೆ ಕೊಟ್ಟಿರುವ ಚೆಕ್ ನ್ನು ಬಳಸಿಕೊಂಡು ಈ ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.